ಆ) 08.02.2001ರಲ್ಲಿ 55 ಲಕ್ಷ ರೂಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ. 28.05.2002 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಇ) ಅನುದಾನದ ಲಭ್ಯತೆ ಇರದಿರುವುದರಿಂದ ವಿಳಂಬವಾಗಿರುತ್ತದೆ.

ಈ) 2006–07ನೇ ಸಾಲಿನಲ್ಲಿ 5 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈಗ ಪುನಃ 20 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗುತ್ತಿದೆ. 07–08 ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಕಟ್ಟಡವನ್ನು ಪೂರ್ಣಗೊಳಿಸಲಾಗುವುದು.

**1059 (1272) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ):** ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ರಾಜ್ಯದಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು 2006–07ನೇ ಸಾಲಿನಲ್ಲಿ ಡಿಸೆಂಬರ್–06 ಮಾಹೆಯೊಳಗೆ ಸಾಧಿಸಿದ ವಿವಿಧ ಯೋಜನೆಗಳ ಗುರಿ ಎಷ್ಟು;

ಆ) ಇವುಗಳು ಸಾಧಿಸಿರುವ ಶೇಕಡಾವಾರು ಪ್ರಗತಿ ಎಷ್ಟು; (ಯೋಜನೆವಾರು ಪ್ರತ್ಯೇಕ ವಿವರ ಒದಗಿಸುವುದು);

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

**ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)**

ಅ) ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು 2006–07ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗಾಗಿ ನಿಗದಿಪಡಿಸಿದ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ಹಾಗೂ ಡಿಸೆಂಬರ್ 2006ರ ಮಾಹೆಯೊಳಗೆ ಸಾಧಿಸಿದ ಪ್ರಗತಿಯ ವಿವರಗಳು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಯ ಹೆಸರು | ವಾರ್ಷಿಕ ಗುರಿ | | ಸಾಧನೆ | | ಗುರಿ ಹಾಗೂ ಸಾಧನೆಯ ಮೇಲೆ ಶೇಕಡಾವಾರು (%) | |
|---|---|---|---|---|---|---|---|
| | | ಭೌತಿಕ ಗುರಿ | ಆರ್ಥಿಕ ಗುರಿ | ಭೌತಿಕ | ಆರ್ಥಿಕ | | |
| 1 | 2 | 3 | 4 | 5 | 6 | 5/3 | 6/4 |
| | **ಪರಿಶಿಷ್ಟ ಜಾತಿ** | | | | | | |
| 1. | ಗಂಗಾ ಕಲ್ಯಾಣ ಯೋಜನೆ (6 ಬಾವಿಗಳು) | 300 | 349.75 | 21 | 66.13 | 7 | 19 |
| 2. | ವೈಯಕ್ತಿಕ ನೀರಾವರಿ ಯೋಜನೆ | 3826 | 4859.83 | 3396 | 2504.38 | 89 | 52 |
| | ಹೆಚ್ಚುವರಿ ಗುರಿ | 6174 | – | | – | – | – |
| 3. | ಭೂ ಒಡೆತನ ಯೋಜನೆ | 3247 | 1237.60 | 1091 | 354.34 | 34 | 29 |
| 4. | ಸ್ವಯಂ ಉದ್ಯೋಗ | 10020 | 1444.60 | 5401 | 868.85 | 54 | 60 |
| 5. | ಸಹಾಯಿ ಕರ್ಮಚಾರಿ ಪುನರ್ವಸತಿ ಯೋಜನೆ | – | 1554.00 | 1191 | 154.18 | – | 10 |
| 6. | ಮಹಿಳಾ ಸಮೃದ್ಧಿ ಯೋಜನೆ (ಮೈಕ್ರೋ ಕ್ರೆಡಿಟ್ ಯೋಜನೆ) | 2000 | 200.00 | 2194 | 130.50 | 110 | 65 |
| | ಒಟ್ಟು (1) | 25567 | 9645.78 | 13294 | 4078.38 | 52 | 42 |
| | **ಪರಿಶಿಷ್ಟ ವರ್ಗ** | | | | | | |
| 1. | ಗಂಗಾ ಕಲ್ಯಾಣ ಯೋಜನೆ (2 ಬಾವಿಗಳು) ಘಟಕ | 300 | 436.98 | 10 | 82.98 | 3 | 19 |
| | ಎಸ್.ಸಿ.ಎ.ಯಿಂದ ಟಿ.ಎಸ್.ಪಿ. (ಗಂ.ಕ.ಯೋ–1 ಬಾವಿ) | – | – | 3 | 5.43 | – | – |
| | ಎಸ್.ಸಿ.ಎ. ಯಿಂದ ಟಿ.ಎಸ್.ಪಿ. (ವೈ.ನೀ.ಯೋ.5 ಬಾವಿಗಳು) | – | – | 5 | 7.40 | – | – |
| 2. | ವೈಯಕ್ತಿಕ ನೀರಾವರಿ ಯೋಜನೆ | 5359 | 3982.15 | 1374 | 920.31 | 26 | 23 |
| | ಹೆಚ್ಚುವರಿ ಗುರಿ | 1279 | – | – | – | – | – |
| 3. | ಭೂ ಒಡೆತನ ಯೋಜನೆ | 1085 | 399.27 | 153 | 85.05 | 14 | 21 |

| | | | | | | | |
|---|---|---|---|---|---|---|---|
| 4. | ಸ್ವಯಂ ಉದ್ಯೋಗ | 3740 | 456.10 | 5785 | 385.70 | 155 | 85 |
| | ಒಟ್ಟು (2) | 11763 | 5274.50 | 7330 | 1486.87 | 62 | 28 |
| | ಒಟ್ಟು (1+2) | 37330 | 14920.28 | 20624 | 5565.25 | 55 | 37 |

(ಎಕರೆಗಳಲ್ಲಿ)

| | | | | | | |
|---|---|---|---|---|---|---|
| | | | | | ಪ.ಜಾತಿ | ಪ.ವರ್ಗ |
| | | | ಭೂ ಒಡೆತನ | ಖುಷ್ಕಿ | 1826.36 | 282.05 |
| | | | | ತರಿ | 307.21 | 27.41 |

**ಪರಾ:** 1. ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯಡಿ ಗುರಿಯನ್ನು ನಿಗದಿಪಡಿಸಿರುವುದಿಲ್ಲ. ನಗರಾಭಿವೃದ್ಧಿ ಇಲಾಖೆಯು ಗುರುತಿಸಿದ ಸ್ಕ್ಯಾವೆಂಜರ್‌ಗಳಿಗೆ 2006–07ನೇ ಸಾಲಿನ ಬಾಕಿ ಹಣದಿಂದ ಪುನರ್ವಸತಿ ಕಲ್ಪಿಸಲಾಗುತ್ತಿದೆ.

2. ಗಂಗಾ ಕಲ್ಯಾಣ ಯೋಜನೆಯ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಹೆಚ್ಚುವರಿ ಕೊಳವೆಬಾವಿಗಳನ್ನು ಕೊರೆಯಲು ಗುರಿ ಹಮ್ಮಿಕೊಳ್ಳಲಾಗಿದೆ.

3. ಇದಲ್ಲದೆ ಪರಿಶಿಷ್ಟ ಜಾತಿಗೆ ರೂ.1343.42 ಲಕ್ಷ ಅವಧಿ ಸಾಲ ಮತ್ತು ಪರಿಶಿಷ್ಟ ವರ್ಗಕ್ಕೆ ರೂ.114.40 ಲಕ್ಷ ಅವಧಿ ಸಾಲವನ್ನು ರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆದು ಸಾಲ ನೀಡಿದೆ.

ಇ) 2006–07ನೇ ಸಾಲಿನಲ್ಲಿ ನಿಗದಿಪಡಿಸಿರುವ ಗುರಿಯನ್ನು ಮಾರ್ಚ್ 2007ನೇ ಮಾಹೆಯ ಅಂತ್ಯದೊಳಗೆ ಸಾಧಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುವುದು.

**1060 (1052) ಶ್ರೀ ಜೀವಿಜಯ ಬಿ.ಎ. (ಸೋಮವಾರ ಪೇಟೆ):** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲ್ಲೂಕಿನ ಸುಂಟಿಕೊಪ್ಪ ಸರ್ಕಾರಿ ಪ್ರಾಥಮಿಕ ಆರೋಗ್ಯ ಘಟಕವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;